೧೨-೦೦ ಪಿ. ಎಂ.

"ಶ್ರೀ ವೇದಾಂತ ಹೆಬ್ಬಿಗೆಯವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ವಿಧಾನ ಸಭೆಯ ಉಪವೇಷನಗಳಿಗೆ ಗೈರುಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ"

(ಯಾವ ಸದಸ್ಯರೂ ವಿರೋಧ ವ್ಯಕ್ತ ಪಡಿಸಲಿಲ್ಲ)

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಶ್ರೀ ವೇದಾಂತಹೆಬ್ಬಿಗೆಯವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಗಮನ ಸೆಳೆಯುವ ಸೂಚನೆಗಳು

ಬೆಂಗಳೂರಿನ ಲೋಕವಾಣಿ ದಿನಪತ್ರಿಕೆ ಕಚೇರಿಗೆ ನಗರಪಾಲಿಕೆಯವರಿಂದ ತೊಂದರೆ ಯಾಗಿರುವುದು

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಬೆಂಗಳೂರು ಶೇಷಾದ್ರಿ ರಸ್ತೆಯಲ್ಲಿರುವ ಲೋಕವಾಣಿ ದಿನ ಪತ್ರಿಕೆಗೆ ಕಚೇರಿಗೆ ನಗರ ಪಾಲಿಕೆಯವರಿಂದ ಉಂಟಾದ ಹಾನಿಯ ಬಗ್ಗೆ, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

An unauthorised construction with A. C. sheet roof, in the premises of Sree Jayadeva Hostel, Seshadri Road was noticed. In this premises the Hostel as well Kalyana Mantap are existing. In the rear portion, on the south East corner of this property Lokavani Press is being run. The approximate area of this building is about 1200 sq. ft. There is also an old existing building situated on the South West corner of this property. In butween these two existing buildings there was an open area of 20' × 40' approximately. In this vacant area, the brick pillers and walls were constructed, upon which the angle iron truses were hoisted and A. C. Sheet covering was also done.

After enquiry it was revealed that this property belongs to Bruhan Mutt Chittoldurgh of which Sre Jagadguru Murugarajendra Swamy is the present Matadhiphathi and one Sri N. M. Siddaiah is said to be the Power of Attorney holder to look after this property. No valid licence was issued for the construction of the A. C. Sheet structure.

There fore, Provisional Order Notice was issued vide No. AEEe G/PO/21/86-87 dated 12-12-1986 to Jagadguru Murugarajendra Swami and the same has deen received by Sri N. M. Siddaiah, th/

Power of Attorney holder on the same day, giving three days time to show cause as to way action should not be taken to prevent further construction and to demolish the existing structure. Since no reply was received, confimatory order notice was issued and the same was received by Sri N. M. Siddaiah on 16-12-1986 with an office seal.

In the Meanwhile Sri N. M. Siddaiah, the P. A. Holder has addressed a letter to the Commissioner, Bangalore Corporation on 26-12-1986 stating that the Swamiji has not applied to the Corporation for sanction of licence for putting up the A. C. Sheet construction and the construction in question is unauthorised and the Swamiji was in no way responsible for the said construction and requested to take such appropriate action as deemed fit.

Further notice under Section 462 was also issued Vide No. AEE/G/462/21/1986-87 dated 24-1-1987 addressed to Sri Jagadguru Murugarajendra Swamy. This was also received by Sri N.M. Siddaiah on 25-1-1987.

Therefore, action was taken by he Bangalore City Corporation Engineers to demolish the unauthorised construction on 4-2-1987 and there is no loss or damage caused to the Lokavani press.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ —ಅದು ಯಾರಿಗೆ ಸಂಬಂಧಪಟ್ಟಿದ್ದು ಎಂದು ತಿಳಿದು ಕೊಂಡಿಲ್ಲ...

ಅಧ್ಯಕ್ಷರು.—ಈ ತರಹ ಎದ್ದು ತಾವು ಮಾತನಾಡಬಾರದು. ಗಮನ ಸೆಳೆಯುವ ಸೂಚನೆಯಲ್ಲಿ ಬೇರೆಯವರಿಗೆ ಮಾತನಾಡುವುದಕ್ಕೆ ಬರುವುದಿಲ್ಲ. ಅದು ನೀತಿ ನಿಯಮಗಳಿಗೆ ವಿರೋಧವಾಗುತ್ತದೆ ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನಗೂ ಅವಕಾಶ ಕೊಡಿ.

ಅಧ್ಯಕ್ಷರು.—ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ತಾವು ರೂಲ್ಸ್ ರೆಗ್ಯೂಲೇಷನ್ಸ್ ಓದಿ ನೋಡಿ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಲೋಕವಾಣಿ ಟ್ರಸ್ಟ್ ಏನಿದೆ ಅದಕ್ಕೆ ಅಧ್ಯಕ್ಷರು ಶ್ರೀಮತಿ ಲೀಲಾದೇವಿ ಪ್ರಸಾದ್ ಅವರು ಸುಮಾರು ೮೫ ವರ್ಷದಿಂದ ಆ ಕಟ್ಟಡದಲ್ಲಿ ವಿದ್ಯಾಲಯ ನಡೆಯುತ್ತಿದೆ ೧೭-೧೨-೮೬ರಲ್ಲಿ ಸಿಬ್ಬಂದಿಯವರು ಕೆಲಸ ಮಾಡಬಾರದೆಂದು ನಿಲ್ಲಿಸಿದರು. ಕಾರಣ, ಮೆಷಿನ್‌ಗೆಲ್ಲ ನೀರು ಬೀಳುತ್ತದೆಂದು ಹೇಳಿ ತೆಗೆದು ಷೀಟ್ ಹಾಕುವುದಕ್ಕೆ ಹೊರಟರು ೮೫ ವರ್ಷದಿಂದ ಇದ್ದುದನ್ನು ರಿಪೇರಿ ಮಾಡುವುದಕ್ಕೆ ಹೊರಟರು. ಷೀಟ್ ಹಾಕಲಾಗಿ ಇದಕ್ಕೆ ಲೈಸೆನ್ಸ್ ತೆಗೆದು ಕೊಳ್ಳದೆ ರಿಪೇರಿ ಮಾಡಕೂಡದೆಂದು ಹೇಳಿದಾಗ ೯-೧-೮೭ರಲ್ಲಿ ಆ ಕೆಲಸವನ್ನು ನಿಲ್ಲಿಸಿದರು. ನಿಲ್ಲಿಸಿದ ಮೇಲೆ ಇವರಿಗೆ ಬಂದು ನೋಟೀಸ್ ಕೂಡ ಕೊಡಲಿಲ್ಲ. ಇದ್ದಕಿದ್ದ ಹಾಗೆ ೪-೨-೮೭ರಲ್ಲಿ ಪೋಲೀಸರ ಜೊತೆಯಲ್ಲಿ ಗ್ಯಾಂಗ್ ಬಂದು ಒಡೆದು ಹಾಕಿದರು. ನೋಟೀಸ್ ಕೊಡುವುದು ಸೌಜನ್ಯ ಅಲ್ಲವೆ ? ಷೀಟ್ ಎಲ್ಲಾ ಜೋರು ಚೂರಾಗಿದೆ. ಅದರ ಫೋಟೋವನ್ನು ತಮ್ಮ ಮೂಲಕ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಪ್ರೆಸ್ ಇದ್ದವರಿಗೆ ನೋಟೀಸ್ ಕೊಡದೆ ಒಡೆದು ಚೂರು ಮಾಡಿದರೆ ಹೇಗೆ ? ಪ್ರೆಸ್ ಅನ್ನು ಹೇಗೆ ನಡೆಸಬೇಕು ? ಸಾರ್ವಜನಿಕ ಕೆಲಸ ಮಾಡುವುದಕ್ಕೆ ಅವಕಾಶ ಇಲ್ಲವೆ ? ಪೋಲೀಸರಿಗೆ ಬೇರೆ ಕೆಲಸ ಇಲ್ಲವೆ ? ಕರೆದವರ ಜೊತೆಯಲ್ಲಿ ಹೋಗುವುದು, ಒಡೆಯುವುದು, ಇದೇ ಉದ್ಯೋಗವಾಯಿತಲ್ಲ ಇವರದ್ದು ಶ್ರೀಮತಿ ಲೀಲಾದೇವಿ ಪ್ರಸಾದ್ ಅಪರೇ ಆ ಟ್ರಸ್ಟಿನ ಅಧ್ಯಕ್ಷರಾಗಿರುವುದರಿಂದ ಅವರಿಗೆ ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ —ನಾನು ಆ ಸಂಸ್ಥೆಯ ಅಧ್ಯಕ್ಷೆಯಾಗಿದ್ದೇನೆ ನನಗೆ ಯಾವ ನೋಟೀಸು ಬಂದಿಲ್ಲ. ಆ ಸಂಸ್ಥೆಗೆ ೮೦ ವರ್ಷದ ಇತಿಹಾಸ ಇದೆ. ಹಿಂದಿನ ಮಹಾರಾಜರು ಅನಾಥಾಶ್ರಮಕ್ಕೆಂದು ಅದನ್ನು ಕೊಟ್ಟಿದ್ದರು. ನಾನು ಆ ಸಂಸ್ಥೆಯ ಅಧ್ಯಕ್ಷೆಯಾಗಿರುವುದರಿಂದ ನನಗೆ ನೋಟೀಸ್ ಕೊಡಬೇಕಾಗಿತ್ತು. ಗಾಂಧಿನಗರ ಕಾರ್ಪೊರೇಷನ್ ಆಫೀಸ್‌ನಲ್ಲಿ ಬಿಲ್ಡಿಂಗ್ ಒಡೆಯುವುದಕ್ಕೆ ರೆಸಲೂಷನ್ ಆಗಿದೆಯಂತೆ ನಾವೇನು ವಿಧಾನಸೌಧದ ಮುಂದೆ ಕಟ್ಟಡ ಕಟ್ಟಿದ್ದೇವೆಯೆ ? ಯಾವುದೋ ಪ್ರೆಸ್‌ಗೆ ಮೆಷಿನರಿ ಬಂತು ಎಂದರೆ ಒಂದು ನೋಟೀಸ್ ಕೊಡದೆ ಕಾರ್ಪೊರೇಷನ್‌ನವರು ಬಿಲ್ಡಿಂಗ್ ಅನ್ನು ಡೆಮಾಲಿಷ್ ಮಾಡಿದ್ದಾರೆ. ನಾವೇನು ಅನ್ ಆಥರೈಸ್ಡ್ ಆಗಿ ಕಟ್ಟಡ ಕಟ್ಟುತ್ತಿದ್ದೇವೆಯೆ ? ಲಕ್ಷಾಂತರ ರೂಪಾಯಿಗಳ ಮೆಷಿನರಿ ಮೇಲೆ ಮಣ್ಣು ಹಾಕಿದ್ದಾರೆ. ಆ ಡ್ಯಾಮೇಜ್ ಅನ್ನು ಅವರಿಂದ ಕ್ಲೈಂ ಮಾಡುತ್ತಿದ್ದೇವೆ. ಅವರು ನಮಗೆ ಒಂದು ಪ್ರಿಲಿಮಿನರಿ ನೋಟೀಸ್ ಆದರೂ ಕೊಡಬೇಕಾಗಿತ್ತು. ಆದ್ದರಿಂದ ಕಾರ್ಪೊರೇಷನ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಆ ಸಂಸ್ಥೆ ಸಾರ್ವಜನಿಕೆ ಸ್ವತ್ತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಷ್ಟು ಬಂದ ಹಾಗೆ ಮುನಿಸಿಪಲ್ ಕಾರ್ಪೊರೇಷನ ನವರು ಎಷ್ಟು ಬಿಲ್ಡಿಂಗ್‌ಗಳನ್ನು ಒಡೆದಿದ್ದಾರೆ. ಗಾಂಧಿನಗರದ ಆಫೀಸ್‌ನಲ್ಲಿ ಒಡೆಯಬೇಕೆಂದು ರೆಸಲ್ಯೂಷನ್ ಮಾಡಿ ಮೆಷಿನರಿಯನ್ನೆಲ್ಲಾ ಹಾಳು ಮಾಡಿದ್ದಾರೆ.

ಶ್ರೀ ಎಂ. ಎಸ್ ಕೃಷ್ಣನ್.—ಕಾರ್ಪೊರೇಷನ್ ಮೇಯರ್ ಕೂಡ ನಿಮ್ಮ ಪಕ್ಷದವರೇ.

ಅಧ್ಯಕ್ಷರು.—ಸರ್ಕಾರದವರು ಉತ್ತರಿಸುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್. ಅದು ಅನಧಿಕೃತ ಕಟ್ಟಡ ಎಂದು ಕಾರ್ಪೊರೇಷನ್ ಅಧಿಕಾರಿಗಳಿಗೆ ಗೊತ್ತಾದ ಮೇಲೆ ಅದನ್ನು ತೆಗೆದು ಹಾಕಬೇಕೆಂದು ವಿಚಾರ ಮಾಡಿದ್ದಾರೆ. ಕಾರ್ಪೊರೇಷನ್ ಅಧಿಕಾರಿಗಳ ಬಲಯದಿಂದ ಬದಿರತಕ್ಕೆ ಉತ್ತರದ ಪ್ರಕಾರ ಈ ಒಂದು ಸಂಸ್ಥೆ ಜಯದೇವ ಹಾಸ್ಪೆಲ್ ಮತ್ತು ಸುತ್ತ ಮುತ್ತ ಜಾಗ ಹಾಗೂ ಕಟ್ಟಡಗಳು ಚಿತ್ರದುರ್ಗ ಮಠದ ಮುರುಘರಾಜೇಂದ್ರ ಸ್ವಾಮೀಜಿಯವರಿಗೆ ಸೇರಿದೆ ಎಂದು ತಿಳಿದುಬಂದಿದೆ. ಅವರು ಸ್ವಾಮೀಜಿಯವರಿಗೆ ನೋಟೀಸ್ ಕೊಟ್ಟಿದ್ದಾರೆ. ಅವರ ಪರವಾಗಿ ಪಿ. ಎ. ನೋಟೀಸನ್ನು ರಿಸೀವ್ ಮಾಡಿದ್ದಾರೆ. ಕಾನೂನು ಪ್ರಕಾರ ೩–೪ ನೋಟೀಸ್‌ಕೊಟ್ಟಿದ್ದಾರೆ. ಇದಾದ ಮೇಲೆ ಅವರು ಸಮಯ ಕೇಳಬೇಕಾಗಿತ್ತು. ನಾವೇ ತೆಗೆದುಹಾಕುತ್ತೇವೆ ಹೇಳಬೇಕಾಗಿತ್ತು. ಅಥವಾ ಲೈಸೆನ್ಸ್ ನವೀಕರಿಸುವುದು ಅಥವಾ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಲ್ಲದಿದ್ದರೆ ಅಲ್ಲ ಎಂದು ಹೇಳಬಹುದಾಗಿತ್ತು. ಅಥವಾ ಇದ್ದರೆ ಅದನ್ನು ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ, ಕಾನೂನು ರೀತ್ಯ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅರ್ಜಿ ಕೊಡಬಹುದಾಗಿತ್ತು. ಸ್ವಾಮಿಜಿಯವರ ಪಿ. ಎ. ಹೇಳುತ್ತಾರೆ, ಒಡೆದು ಹಾಕಿದರೆ ನಾವು ಅಡ್ಡ ಬರುವುದಿಲ್ಲ ಎಂದು ನನ್ನಲ್ಲಿರುವ ದಾಖಲೆ ಪ್ರಕಾರ ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರ ಹತ್ತಿರ ಹೆಚ್ಚಿನ ವಿಚಾರ ಇದ್ದರೆ, ಕಾರ್ಪೊರೇಷನ್‌ನವರು ಹೆಚ್ಚು ಕಡಿಮೆ ಮಾಡಿದ್ದರೆ ಸನ್ಮಾನ್ಯ ಶಾಸಕಿಯವರು ಹೇಳಿದರು ಅವರ ಮೇಲೆ ದಾವಾ ಹಾಕುತ್ತೇವೆಂದು, ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ನನ್ನನ್ನು ಕೇಳಬೇಕಾಗಿಯೂ ಇಲ್ಲ, ನಾನು ಹೇಳಬೇಕಾಗಿಯೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—೫೦–೬೦ ವರ್ಷದಿಂದ ಜಯದೇವ ಹಾಸ್ಪೆಲ್‌ನವರು ಟ್ಯಾಕ್ಸ್ ತುಂಬುತ್ತಿದ್ದಾರೆ. ಅದು ಸಾರ್ವಜನಿಕ ಸಂಸ್ಥೆ ಅದಕ್ಕೆ ನೋಟೀಸ್ ಕೊಟ್ಟಿಲ್ಲ ಸಂಸ್ಥೆಯ ವರಿಗೆ ಕಾರ್ಪೊರೇಷನ್ನಿನವರು ಹೇಳಬೇಕಾಗಿತ್ತು. ೨ ಗಂಟೆ ಮೊದಲೇ ಟೌನ್ ಪ್ಲಾನಿಂಗ್ ಕಮಿಟಿಯ ವರು ಬಂದಿದ್ದರು. ಬಂದು ಇನ್‌ಸ್ಪೆಕ್ಷನ್ ಮಾಡಿ ೧೧ ಗಂಟೆಗೆ ನಮ್ಮ ಸೆಕ್ರೆಟರಿ ಮತ್ತು ವೈಸ್ ಪ್ರೆಸಿಡೆಂಟರಿಗೆ ಆಫೀಸಿಗೆ ಬರಲು ಹೇಳಿ ೯ ಗಂಟೆಗೆ ಪೋಲೀಸರನ್ನು ತಂದು ಒಡೆಯುವ ಅಗತ್ಯ ಏನಿತ್ತು? ನೋಟೀಸ್ ಕೊಟ್ಟಿಲ್ಲ. ೧೧ ಗಂಟೆಗೆ ಪ್ರೆಸಿಡೆಂಟರನ್ನು ಕಳುಹಿಸಿ ಎಂದು ಹೇಳಿದ್ದಾರೆ, ಕಾರ್ಪೊರೇಷನ್ ಆಫೀಸಿಗೆ ಕಳುಹಿಸಿದ್ದೇವೆ. ಆದರೆ ೯–೩೦ ಗಂಟೆಗೆ ಪೋಲೀಸರನ್ನು ಕರೆದುಕೊಂಡು ಬಂದು ಒಡೆದಿದ್ದಾರೆ. ನಮಗೆ ನೋಟೀಸ್ ಬಂದಿಲ್ಲ, ಆ ಜಾಗ ಯಾವುದು ಎಂಬುದನ್ನು ನೋಡಬಹುದಾಗಿತ್ತು. ಕಾರ್ಪೊರೇಷನ್ನಿನವರು ಒನರ್ ಯಾರು ಎಂಬುದನ್ನು ವೆರಿಫೈ ಮಾಡದೆ ಕೆಲಸ ಮಾಡಿದ್ದಾರೆ. ಜಾಗ ಒಬ್ಬರದು, ನೋಟೀಸ್ ಇನ್ನೊಬ್ಬರಿಗೆ ಕೊಟ್ಟು ಕಟ್ಟಡ ಒಡೆಯುವುದು ಯಾವ ನ್ಯಾಯ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ೧೨-೧೨-೧೯೮೬ ರಿಂದ ನೋಟೀಸ್ ಜಾರಿಯಾಗುತ್ತಾ ಬಂದಿದೆ ೨೫-೧-೧೯೮೭ರಲ್ಲಿ ಲಿಖಿತ ಮೂಲಕ ಇದು ನಮಗೆ ಸೇರಿದ್ದುದು ನಮ್ಮ ಸ್ವಾಧೀನದಲ್ಲಿದೆ ಎಂದು ಕಾರ್ಪೊರೇಷನ್ನಿಗೆ ಅರ್ಜಿ ಬಂದಿಲ್ಲ. ನಾವೇನು ಮಾಡುವುದು ? ಕಾರ್ಪೊರೇಷನ್ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ನನಗೆ ಅವರು ಮಾಡಿರುವುದರಲ್ಲಿ ಕಾನೂನಿಗೆ ವಿರುದ್ಧವಾಗಿ ಯೋಗಿಲ್ಲ ಎಂದು ವೀಲ್ಲೋಟಕ್ಕೆ ಗೊತ್ತಾಗುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—೯-೧೧-೧೯೮೭ ರಂದು ನಕ್ಷೆ ಜೊತೆಯಲ್ಲಿ ಇವರು ಅರ್ಜಿ ಕಳುಹಿಸಿದ್ದಾರೆ. ೧೩-೧೧-೧೯೮೭ ರಲ್ಲಿ ಅದು ಸರಿಯಿಲ್ಲ, ಇದು ಸರಿಯಿಲ್ಲ ಬೇರೆ ದಾಖಲಾತಿ ಕೊಡಿ ಎಂದು ವಾಪಸ್ ಕಳುಹಿಸಿದ್ದಾರೆ. ಇವರು ಕೊಡುವವರೆಗೆ ಅವರು ಸುಮ್ಮನಿರಬೇಕಾಗಿತ್ತೋ ಇಲ್ಲವೊ? ೧೩-೧-೧೯೮೭ಕ್ಕೆ ವಾಪಸ್ ಕಳುಹಿಸಿ ನಾಲ್ಕನೇ ತಾರೀಖು ಓಡಿಹೋಗಿ ಒಡೆದಿದ್ದು ಏತಕ್ಕೆ? ಆಲ್ಲಿರುವ ಮೆಷಿನರಿ ಒಡೆದುಹಾಕಿದ್ದಾರೆ. ಆದರ ಬಗ್ಗೆ ಫೋಟೊ ಕಳುಹಿಸಿದ್ದೇನೆ. ಇಂಥ ಕೆಲಸ ಮಾಡುತ್ತಾರೆ. ಇದನ್ನೇನಂ ಅಡ್ಮಿನಿಸ್ಟ್ರೇಷನ್ ಎಂದು ಹೇಳುತ್ತೀರಾ? ಇಷ್ಟ ಬಂದಹಾಗೆ ಪೋಲೀಸರನ್ನು ಕರೆದುಕೊಂಡು ಒಡೆದುಹಾಕುವುದು, ಇದೆಂಥ ಉದ್ಯೋಗ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಅವರಿಗೆ ಸಾಕಷ್ಟು ಸೂಚನೆ ಕೊಟ್ಟ ಕಾರ್ಪೊರೇಷನ್ ಆಕ್ಟ್ ಪ್ರಕಾರ ಆ ಸಂಸ್ಥೆಯ ಮಾಲೀಕರಿಗೆ ನೋಟೀಸ್ ಕೊಟ್ಟಿದ್ದಾರೆ. ಅವರ ಪರವಾಗಿ ಕಾನೂನು ಪ್ರಕಾರ ನೇಮಕವಾಗಿರತಕ್ಕ ಪವರ್ ಆಫ್ ಅಟಾರ್ನಿ ಹೋಲ್ಡರ್‌ಗೆ ಕೊಟ್ಟಿದ್ದಾರೆ. ಕಾನೂನು ಪ್ರಕಾರ ಅದಕ್ಕಿಂತ ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ಡಿಸೆಂಬರ್ ೧೨ನೇ ತಾರೀಖು ಇದು ಪ್ರಾರಂಭವಾಗಿದ್ದುದು. ಒಡೆದುಹಾಕಿದ್ದು ೪-೨-೧೯೮೭ರಲ್ಲಿ. ಡಿಸೆಂಬರ್ ೧೨ನೇ ತಾರೀಖಿನಿಂದ ೪-೨-೧೯೮೭ರವರೆಗೂ ತಮ್ಮ ಅಭಿಪ್ರಾಯವನ್ನು ಕಾರ್ಪೊರೇಷನ್ನಿಗೆ ಲಿಖಿತ ಮೂಲಕ ತಿಳಿಸಿ ಅಧಿಕೃತವಾಗಿ ಇಲ್ಲಿದ್ದೇವೆ, ಕಟ್ಟಿರುವ ಕಟ್ಟಡ ಅನಧಿಕೃತ ಅಲ್ಲ ಎಂದು ಹೇಳಬಹುದಾಗಿತ್ತು. ಹೇಳುವುದಕ್ಕೆ ಅವಕಾಶ ಇತ್ತು. ನಮಗೆ ಬಂದಿರುವ ಮಾಹಿತಿ ಪ್ರಕಾರ ನಾನು ಉತ್ತರ ಕೊಡುತ್ತಿದ್ದೇನೆ. ಬೇರೆ ಮಾಹಿತಿ ಇದ್ದರೆ ತಾವು ಕಳುಹಿಸಿಕೊಡಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾತನಾಡಿದರೆ ಪ್ರೆಸ್ ಫ್ರೀಡಮ್ ಎಂದು ಹೇಳುತ್ತಾರೆ. ಪ್ರೆಸ್ ನಡೆಸುತ್ತಿರುವವರಿಗೆ ಈ ರೀತಿ ಮಾಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರೆಸ್ ಫ್ರೀಡಂಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಕಾರ್ಪೊರೇಷನ್ನಿನವರಿಗೆ ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮುಂದಿನ ಕಾಲಿಂಗ್ ಅಟೆನ್‌ಷನ್ ಶ್ರೀ ಹಿಂಡಸಗೇರಿ ಅವರದು.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಆಗಬಹುದು, ಶ್ರೀ ಕೋಳಿವಾಡ ಅವರು ಗೈರುಹಾಜರಿಯಾಗಿದ್ದಾರೆ.

(2) *Reg : Delay in implementation of the Cauvery Water Suppjy Scheme–III Stage.*

SRI M RAGHUPATHY.—I call the attention of the Hon'ble Urban Development Minister regarding the delay in the implementation of the Cauvery Water Supply Scheme, III Stage.

SRI A. LAKSHMISAGAR (Minister for Urban Development).—Mr. Speaker Sir, I beg to make the following statement.

The Cauvery Water Supply Scheme Stage III with an estimated cost of Rs. 240 crores has been taken up during 1985–86 to bring an additional 270 Million Litres of water per day by 1990.